ವಿಷಯ:- ಗ್ರಾಮಗಳಿಗೆ ರುದ್ರ ಭೂಮಿಯ ಮಂಜುರಾತಿ.

76(170)

ಶ್ರೀ ಹೆಚ್. ಶಿವಪ್ಪ (ಹರಿಹರ):- ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:-

1) ರಾಜ್ಯದ ಬಹುತೇಕ ಗ್ರಾಮಗಳಲ್ಲಿ ಪ್ರತ್ಯೇಕ ಜನಾಂಗದವರಿಗೆ ರುದ್ರ ಭೂಮಿಯ ಉದ್ದೇಶಕ್ಕಾಗಿ ಭೂಮಿಯ ಉಪಲಬ್ಧವಾಗದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

2) ಹಾಗಿದ್ದಲ್ಲಿ, ರುದ್ರ ಭೂಮಿಯ ಉದ್ದೇಶಕ್ಕಾಗಿ ಸ್ಥಳವನ್ನು ಕಾಯ್ದಿರಿಸಲು ಸರ್ಕಾರವು ತೆಗೆದುಕೊಂಡ ಕ್ರಮಗಳೇನು?

ಶ್ರೀ ರಮೇಶ್ ಸಿ. ಜಿಗಜಿಣಗಿ (ಕಂದಾಯ ಸಚಿವರು):-

1) ಹೌದು.

2) ಪ್ರತಿ ಹಳ್ಳಿಯಲ್ಲಿ ಎಲ್ಲಾ ಜನಾಂಗದವರಿಗೆ ರುದ್ರ ಭೂಮಿಗಾಗಿ ಜಮೀನನ್ನು ಕಾಯ್ದಿರಿಸಲು ಪ್ರತಿ ಸಾಲಿನ ಆಯವ್ಯಯದಲ್ಲಿ ಒಂದು ಕೋಟಿ ರೂಪಾಯಿಯ ಅವಕಾಶ ಕಲ್ಪಿಸಲು ಈ ಮೊದಲೇ ಸರ್ಕಾರವು ಕ್ರಮಕೈಗೊಂಡಿದೆ. ಅದಲ್ಲದೆ ಭೂಸ್ವಾಧೀನತೆಯಿಂದಾಗಿ ಜಮೀನು ಕಾಯ್ದಿರಿಸಲು ವಿಳಂಭವಾಗುತ್ತಿರುವುದನ್ನು ತಪ್ಪಿಸಲು ಆಶ್ರಯ ಯೋಜನೆ ಮಾದರಿ ನೇರವಾಗಿ ಜಮೀನುಗಳನ್ನು ಕೊಂಡುಕೊಳ್ಳಲು ಸರ್ಕಾರಿ ಆದೇಶ ಸಂಖ್ಯೆ ಕಂ ಇ 185 ಭೂಸ್ವಾವ್ಯಾ 92 ದಿನಾಂಕ 20.10.95ರಡಿ ಜಿಲ್ಲಾಧಿಕಾರಿಗಳಿಗೆ ಅನುಮತಿ ನೀಡಲಾಗಿದೆ. ಅನಿವಾರ್ಯ ಪ್ರಸಂಗಗಳಲ್ಲಿ ತುರ್ತು ಅಧಿನಿಯಮ ಬಳಸಿ ಭೂಸ್ವಾಧೀನ ಮಾಡಿ ಭೂಮಿ ನೀಡಲು ಸಹ ಆದೇಶಿಸಲಾಗಿದೆ.

ವಿಷಯ:- ಉಡುಪಿ ತಾಲ್ಲೂಕಿನಲ್ಲಿ ಹಕ್ಕು ಪತ್ರಕ್ಕಾಗಿ ಸಲ್ಲಿಸಿದ ಅರ್ಜಿಗಳ ಸಂಖ್ಯೆ.

77(218)

ಶ್ರೀ ಯು.ಆರ್. ಸಭಾಪತಿ (ಉಡುಪಿ):- ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:-

ಅ) 1994-95 ರಿಂದ ಉಡುಪಿ ತಾಲೂಕಿನಲ್ಲಿ ಹಕ್ಕುಪತ್ರಕ್ಕಾಗಿ ಅರ್ಜಿ ಸಲ್ಲಿಸಿದವರ ಸಂಖ್ಯೆ ಎಷ್ಟು;

ಆ) ಆ ಪೈಕಿ ಎಷ್ಟು ಜನರಿಗೆ ಹಕ್ಕು ಪತ್ರ ನೀಡಲಾಗಿದೆ; ಇನ್ನು ಉಳಿದ ಜನರಿಗೆ ಯಾವಾಗ ಹಕ್ಕು ಪತ್ರ ನೀಡಲಾಗುವುದು?

ಶ್ರೀ ರಮೇಶ್ ಸಿ. ಜಿಗಜಿಣಗಿ (ಕಂದಾಯ ಸಚಿವರು):-

ಅ) 825.

ಆ) 488 ಜನರಿಗೆ 1994-95 ರಿಂದ ಹಕ್ಕು ಪತ್ರ ನೀಡಲಾಗಿದೆ. ಉಳಿದ ಜನರಿಗೆ ಆದಷ್ಟು ಬೇಗ ಹಕ್ಕು ಪತ್ರ ನೀಡಲು ಕ್ರಮ ಕೈಗೊಳ್ಳಲಾಗುವುದು.